ನಾವೇನಾದರೂ ಎಲ್ಲಿ ತಪ್ಪಿದ್ದೇವೆಯೋ ನಮ್ಮನ್ನು ಬೇಕಾದರೂ ಗಲ್ಲಿಗೆ ಹಾಕುವುದಾದರೆ ಹಾಕಬಹುದು. ಮಾತ್ತೆತ್ತಿದ್ದರೆ ಈ ಸರ್ಕಾರ ಉಳಿಸುವುದಕ್ಕಾಗುವುದಿಲ್ಲ, ಈ ಸರ್ಕಾರ ಉಳಿಸುವುದಕ್ಕಾಗುವುದಿಲ್ಲ, ಇನ್ನೇನು ಇವರ ಸರ್ಕಾರ ಮಾಡಿದರೆ ಉಳಿಸಿಬಿಡುತ್ತದೆಯೇ? Let there be a debate I will answer every point. I have no objection.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರಿಯಿದೆ, ಸಭಾನಾಯಕರು ಹೇಳುತ್ತಿರುವುದು ಸರಿಯಿದೆ. ಡಿಟೈಲ್ಸ್ ಡಿಸ್‌ಕಶನ್ ಈ ವಿಷಯದಲ್ಲಿ ಇಲ್ಲೇ ಆಗಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಇದಕ್ಕೆ ನಾವೇನು ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಖಂಡಿತ, ಹಿಂದಿನ ಸರ್ಕಾರ ಹೇಗೆ ಜವಾಬ್ದಾರಿ...

Mr. Speaker : Angry exchanges and unnecessary debate is not the subject matter now. We are not interested in any thing other than the official who is in distress.

ಶ್ರೀ ಹೆಚ್.ಡಿ. ದೇವೇಗೌಡ : ಮಾತ್ತೆತ್ತಿದರೆ ಸರ್ಕಾರದಲ್ಲಿ.... ಇವ್ವೊತ್ತು ಯಾರು ಬೇಕಾದರೂ ಇಂಟರೆಸ್ಟ್ ಇಲ್ಲ, ಇದಕ್ಕೆ ಒಂದು ಲಿಮಿಟ್ ಇದೆ, ಅವ್ವೊತ್ತು ಭಾನುವಾರ ಮಧ್ಯಾಹ್ನ I tried to contact Mr. Nariman in Bombay. ನಾನು ಇದೇ ಸದನದಲ್ಲಿ ಹೇಳಿದ್ದೇನೆ, ನಮಗೇನು ಜವಾಬ್ದಾರಿ ಇಲ್ಲವೇ?

ಶ್ರೀ ಹೆಚ್.ಎನ್. ನಂಜೇಗೌಡ : ನಾನೇನು ಅಂದುಕೊಂಡೆ ಅಂದರೆ ಅಧ್ಯಕ್ಷರೇ, ಈ ಸಭೆಗೆ ರೆಸ್ಯೂಲ್ಯೂಷನ್ ಮಾಡುವುದಕ್ಕೆ ಅವಕಾಶ ಇದ್ದರೆ.

ಅಧ್ಯಕ್ಷರು : ಅದನ್ನೂ ಕೂಡ ಅಲ್ಲಿ ಕುಳಿತು ಚರ್ಚೆ ಮಾಡೋಣ. I appeal to the entire House. ಕರ್ನಾಟಕ ವಿಧಾನ ಸಭೆ ಒಂದು ಹೊಸ ಸಂಪ್ರದಾಯವನ್ನು ಸೃಷ್ಟಿ ಮಾಡಲಿ, ಒಬ್ಬ ದಕ್ಷ ಪ್ರಾಮಾಣಿಕ ಅಧಿಕಾರಿಗೆ ತೊಂದರೆಯಾದಾಗ, ತನ್ನ ಕಳಕಳಿಯನ್ನು ವ್ಯಕ್ತಪಡಿಸುವುದರಲ್ಲಿ ನಾವು ಒಂದು ಹೊಸ ಸಂಪ್ರದಾಯವನ್ನು ಸೃಷ್ಟಿ ಮಾಡೋಣ. ಅದು ಹೇಗೆ ಮಾಡಬೇಕು ಎನ್ನುವುದನ್ನು ತಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ನೀವೆಲ್ಲರೂ ಅಲ್ಲಿಗೆ ದಯಮಾಡಿ ಬನ್ನಿ. ಒಂದು ಹತ್ತು ನಿಮಿಷ ಸದನವನ್ನು ಮುಂದಕ್ಕೆ ಹಾಕಿದರೆ ಏನೂ ಅನಾಹುತ ಆಗುವುದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಈ ಸಭೆಯಲ್ಲಿ ಮಾತನಾಡಿದ್ದೆಲ್ಲಾ ಪೇಪರ್‌ನಲ್ಲಿ ಬರುತ್ತದೆ. ದೇವೇಗೌಡರಿಗೆ ಏನೂ ಜವಾಬ್ದಾರಿ ಇಲ್ಲ ಎಂದರೆ ನನಗೆಲ್ಲಾ ಗೊತ್ತಿದೆ ಈ ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂದು ಹೇಳಿ. One thing I would like to make it clear. We are not hesitating for any discussion. ಸಬ್‌ಜುಡೀಸ್ ಅಲ್ಲ ಇದು ಮುಗಿದು ಹೋಗಿದೆ ನೀವು ಏನು ಬೇಕಾದರೂ ಚರ್ಚೆ ಮಾಡಿ, ಎಲ್ಲಾ ದಾಖಲೆಗಳನ್ನು ಸಭೆಯ ಮುಂದೆ ಇಡೋಣ do not unnecessarily draw conclusion that this Government has failed.

ಅಧ್ಯಕ್ಷರು : ಅರ್ಧ ಗಂಟೆ ಕಾಲ ಸದನವನ್ನು ಮುಂದಕ್ಕೆ ಹಾಕಿದ್ದೇನೆ.

(3-37ಕ್ಕೆ ಸದನವನ್ನು ಅರ್ಧ ಗಂಟೆಗಳ ಕಾಲ ಮುಂದಕ್ಕೆ ಹಾಕಲಾಯಿತು)

(ಸಭೆ ಪುನಃ 5.07 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು ತಮ್ಮ ಪೀಠದಲ್ಲಿ ಉಪಸ್ಥಿತರಾದರು)

ಅಧ್ಯಕ್ಷರು : ಕರ್ನಾಟಕ ಪುರಸಭೆಗಳ ತಿದ್ದುಪಡಿ ವಿಧೇಯಕ 1995...

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ....

ಅಧ್ಯಕ್ಷರು : ಈಗ ತಮಗೆ ಗೊತ್ತಿದೆ, ಇದು ಬಹಳ ಸೂಕ್ಷ್ಮವಾದಂಥ ವಿಚಾರ. ತಮ್ಮನ್ನು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮತ್ತು ಸನ್ಮಾನ್ಯ ಸಭಾನಾಯಕರನ್ನೂ ಸಂಪರ್ಕಮಾಡಿ ನಮ್ಮ ಆತಂಕ ಏನಿದೆ ಅದಕ್ಕೆ ಸ್ಪಂದಿಸಿ ನಮ್ಮೆಲ್ಲರ ವಿಶ್ವಾಸ ಮತ್ತು ಗೌರವಕ್ಕೆ ಅರ್ಹರಾಗಿರತಕ್ಕಂಥ ಒಬ್ಬ ಅಧಿಕಾರಿಗೆ ಏನು ತೊಂದರೆ ಇದೆ, ತೊಂದರೆ ಆಗಿದೆ ಅದರಿಂದ ಪಾರು ಮಾಡುವುದಕ್ಕೆ ನಮ್ಮ ಇತಿಮಿತಿಯೊಳಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದರ ಜವಾಬ್ದಾರಿಯನ್ನು ನಾನು ಅವರಿಗೆ ಒಪ್ಪಿಸಿದ್ದೇನೆ, ನಿಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು. ಅದನ್ನು ಅಲ್ಲಿಗೇ ಮುಕ್ತಾಯಮಾಡಿ ಮುಗಿಸುತ್ತೇನೆ. ಎಲ್ಲಿ ಮಂತ್ರಿಗಳು? ಯಾರಾದರೊಬ್ಬರು ಮೂವ್ ಮಾಡಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೂವ್ ಮಾಡುವವರೇ ಇಲ್ಲ. ಯಾರಿಗೂ ಆಸಕ್ತಿ ಇಲ್ಲ. ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳು ಇಲ್ಲ.

ಅಧ್ಯಕ್ಷರು : ಒಂದು ಕೆಲಸ ಮಾಡೋಣ. ಅದನ್ನು ಡೆಫರ್ ಮಾಡಿ We will move on to the next item. ಪರವಾಗಿಲ್ಲ. ಈಗ ಏನು ಅವರು on account of some problem. ಕ್ಯಾಬಿನೇಟ್ ಮೀಟಿಂಗ್ ಇಟ್ಟುಕೊಳ್ಳುತ್ತೇವೆ ಅಂತ ಹೇಳಿದರಲ್ಲ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ಅಡ್ಜರ್ನ್ ಮಾಡಿ. ಇಲ್ಲಿ ಯಾರೂ ಬಿಲ್ ಮೂವ್ ಮಾಡುವವರು ಇಲ್ಲವೆಂದರೆ ಹೇಗೆ? ಏನು ಮಾಡುತ್ತೀರಿ ಹೇಳಿ.

ಶ್ರೀ ಡಿ. ಮಂಜುನಾಥ್ : ನಾನು ಮೂವ್ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೂವ್ ಮಾಡುವುದಲ್ಲ, ಕನ್ಸಿಡರೇಶನ್ ಇದೆ.

ಅಧ್ಯಕ್ಷರು : ಈಗ ನಾವು ಒಂದು ಕೆಲಸ ಮಾಡೋಣ.....

ಶ್ರೀ ಡಿ. ಮಂಜುನಾಥ್ : ಡಿಮ್ಯಾಂಡ್ಸ್ ಮೇಲೆಯಾದರೂ ಚರ್ಚೆಯಾಗಲಿ.

ಅಧ್ಯಕ್ಷರು : ಬಿಲ್‌ಗೆ ಸಂಬಂಧಪಟ್ಟ ಮಂತ್ರಿಗಳು ಬರಲಿ. ಟೆಂಪರರಿ ಅರೇಂಜ್‌ಮೆಂಟ್ ಮಾಡುವುದೇನೂ ಬೇಕಾಗಿಲ್ಲ. We will take up the Bill next day. Now, we will go to Demands for Grants. I request Mr. Veerappa Moily to continue his speech on the demands which is the next item of the agenda.

ವಿತ್ತೀಯ ಕಾರ್ಯಕಲಾಪಗಳು

1995-96ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ

+ ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಕ್ಷಮಿಸಬೇಕು, ನಾನು ಈಗಾಗಲೇ ಹೆಚ್ಚು ಸಮಯವನ್ನು ತೆಗೆದುಕೊಂಡಿದ್ದೇನೆ. ವಿದ್ಯುತ್ ಇಲಾಖೆಯ ಬೇಡಿಕೆಯನ್ನೂ ಕೂಡ ಈ ಚರ್ಚೆಯಲ್ಲಿ ಅಳವಡಿಸಲಾಗಿದೆ. ಇದರ ವಿಚಾರವಾಗಿ, ಬಹಳ ಸೂಕ್ಷ್ಮವಾಗಿ ಕೆಲವೇ ಮಾತುಗಳಲ್ಲಿ ಹೇಳುವುದಕ್ಕೆ ಅಪೇಕ್ಷಿಪಡುತ್ತೇನೆ. ಕರ್ನಾಟಕ ರಾಜ್ಯ ಮೊದಲಿಂದಲೂ ಕೂಡ ಹೈಡಲ್ ಜನರೇಷನ್‌ನಲ್ಲಿ it has been a Posheer. ಆದರೆ, ಕ್ರಮೇಣ ಏನಾಯಿತು? ಆ ಸ್ಥಾನವನ್ನು ನಾವು ಕಳೆದುಕೊಂಡಿದ್ದೇವೆ. ಯಾವ ಮುಂದಾಳುತನವನ್ನು ವಿದ್ಯುತ್ ಉತ್ಪಾದನೆಯಲ್ಲಿ ನಾವು ಗಳಿಸಿಕೊಂಡಿದ್ದೆವೋ, ಅದನ್ನು ಇವತ್ತು ಕಳದುಕೊಳ್ಳತಕ್ಕಂಥ ಪರಿಸ್ಥಿತಿ ಬಂದಿದೆ. ಅದೂ ಕೂಡ ಸಾಧಾರಣವಾಗಿ